# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 76 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 04.12.2023 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಡಯಾಲಿಸಿಸ್ ಘಟಕಗಳ ಸಂಖ್ಯೆ ಎಷ್ಟು: ಸದರಿ ಘಟಕಗಳ ನಿರ್ವಹಣೆಯನ್ನು ಯಾವ ಕಂಪನಿಗಳಿಗೆ ವಹಿಸಲಾಗಿದೆ: (ಕಂಪನಿಗಳವಾರು ವಿವರ ನೀಡುವುದು) | ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಯಾಲಿಸಿಸ್ ಘಟಕಗಳ ಸಂಖ್ಯೆ:03 ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಯಾಲಿಸಿಸ್ ಯಂತ್ರಗಳ ಸಂಖ್ಯೆ: 19<br><br>ದಿನಾಂಕ:31.09.2023ರವರೆಗೆ M/s ESKAG ಸಂಜೀವಿನಿ ಸಂಸ್ಥೆಯವರಿಗೆ ಡಯಾಲಿಸಿಸ್ ಸೇವೆಗೆ ಅನುಮತಿ ನೀಡಲಾಗಿದ್ದು, ಅನುಮತಿ ಹಿಂಪಡೆದು ದಿನಾಂಕ: 01.10.2023 ರಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆಯ ಮೂಲಕ ಕಾರ್ಯನಿರ್ವಹಿಸಲಾಗುತ್ತಿದೆ. |
| ಆ) | ಸದರಿ ಸಂಸ್ಥೆಗಳು ಡಯಾಲಿಸಿಸ್ ಘಟಕವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಇ) | ಡಯಾಲಿಸಿಸ್ ಘಟಕಗಳು ಸರಿಯಾಗಿ ನಿರ್ವಹಣೆ ಮಾಡದಿರುವುದರಿಂದ ರೋಗಿಗಳು ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು: | ಡಯಾಲಿಸಿಸ್ ಸೇವೆಗೆ ಅನುಮತಿ ನೀಡಲಾದ ಸಂಸ್ಥೆಯವರು ಉತ್ತಮವಾಗಿ ಕಾರ್ಯನಿರ್ವಹಿಸದಿರುವುದರಿಂದ ಹಾಗೂ ಅವಧಿಯೂ ಮುಕ್ತಾಯಗೊಂಡಿರುವ ಕಾರಣ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆಯ ವತಿಯಿಂದ ನಿರ್ವಹಿಸಲಾಗುತ್ತಿದೆ. |

...2

| | | |
|---|---|---|
| ಈ) | ಈ ಡಯಾಲಿಸಿಸ್ ಘಟಕಗಳನ್ನು ನಿರ್ವಹಣೆ ಮಾಡಲು ಖಾಸಗಿ ಕಂಪನಿಗಳಿಗೆ ನೀಡಿರುವ ಜವಾಬ್ದಾರಿಗಳೇನು: ಯಾವ ಯಾವ ಕಾರ್ಯಗಳನ್ನು ಅವರು ಮಾಡಬೇಕಾಗಿರುತ್ತದೆ: ಒಡಂಬಡಿಕೆ ಅಥವಾ ಒಪ್ಪಂದದ ಕರಾರುಗಳೇನು: (ವಿವರ ಮತ್ತು ಕರಾರು ಒಪ್ಪಂದದ ಪ್ರತಿಯನ್ನು ನೀಡುವುದು) | ಯಾವುದೇ ಡಯಾಲಿಸಿಸ್ ಕೇಂದ್ರಗಳ ನಿರ್ವಹಣೆಯಲ್ಲಿ ತೊಂದರೆಯಾದಲ್ಲಿ ಸಂಸ್ಥೆಯವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ. ನಿಯಮ ಉಲ್ಲಂಘನೆಯ ಸಂದರ್ಭದಲ್ಲಿ ESKAG/BRS ಸಂಸ್ಥೆಯವರ ವಿರುದ್ಧ ದಂಡವನ್ನು ವಿಧಿಸಲಾಗಿದೆ.<br><br>ಈಗಾಗಲೇ ಕ್ಲಿನಿಕಲ್ Audit ಮಾಡಲಾಗಿದ್ದು, ಕ್ಲಿನಿಕಲ್ Audit ವರದಿಯಂತೆ ರಾಜ್ಯ ಸರ್ಕಾರದ ಶೇಕಡಾ 10% ರಷ್ಟು ದಂಡವನ್ನು ESKAG/BRS ಸಂಸ್ಥೆಗಳಿಂದ ವಸೂಲಿ ಮಾಡಲಾಗಿದೆ. ಹಾಗೂ ಸದರಿ ಸಂಸ್ಥೆಗಳ ಸೇವೆಗಳನ್ನು ಮುಕ್ತಾಯಗೊಳಿಸಲಾಗಿದೆ. |
| ಉ) | ಸರಿಯಾಗಿ ಕಾರ್ಯನಿರ್ವಹಣೆ ಮಾಡದೆ ಇರುವ ಕಂಪನಿಗಳ ಗುತ್ತಿಗೆಯನ್ನು ರದ್ದುಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು? | |

**ಸಂಖ್ಯೆ: ಆಕುಕ 66 ಎಸ್.ಟಿ.ಕ್ಯೂ 2023**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.